ಬೆಂಗಳೂರು ದಕ್ಷಿಣ ತಾಲ್ಲೂಕು ತಾವರೆಕೆರೆ ಹೋಬಳಿ ಚಿಕ್ಕೆಲೂರು ರಾಂಪುರದಲ್ಲಿ ಇಂಡೋ ಅಮೆರಿಕನ್ ಕಂಪೆನಿಯವರು ಅನಧಿಕೃತವಾಗಿ ಭೂ ಕಬಳಿಸಿರುವ ಬಗ್ಗೆ

6 (51)

ಶ್ರೀ ಹೆಚ್.ಸಿ.ಬಾಲಕೃಷ್ಣ (ಮಾಗಡಿ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ದಕ್ಷಿಣ ತಾಲ್ಲೂಕು ತಾವರೆಕೆರೆ ಹೋಬಳಿ, ಚಿಕ್ಕೆಲೂರ್ ರಾಂಪುರ ಗ್ರಾಮದ ಸ.ನಂ. 1, 3, 14, 18 ಹಾಗೂ ಇತರೆ ಸ.ನಂ.ಗಳಲ್ಲಿ ಇಂಡೋ ಅಮೇರಿಕನ್ ಹೈಬ್ರಿಡ್ ಸೀಡ್ಸ್ ಕಂ.ಯವರು ಅತಿಕ್ರಮಿಸಿಕೊಂಡಿರುವ ಮಂಜೂರಾತಿ ಪಡೆಯಲು ಇಚ್ಚಿಸಿರುವ ಜಮೀನಿನ ಪ್ರಮಾಣವೆಷ್ಟು? ಸ.ನಂ. ಸಹಿತ ಜಮೀನಿನ ವಿವರ ರೈತರ ವಿವರ ನೀಡುವುದು;

ಆ) ಈ ಜಮೀನನ್ನು ಹಲವಾರು ವರ್ಷಗಳಿಂದ ರೈತರು ಉಳುಮೆ ಮಾಡುತ್ತಿದ್ದು ಈ ಕಂಪನಿಯವರಿಗೆ ಜಮೀನು ನೀಡಿದರೆ ಸ್ಥಳೀಯ ರೈತರಿಗೆ ತೊಂದರೆ ನೀಡಿ ಅನ್ಯಾಯ ಮಾಡಿದಂತಾಗುವುದಿಲ್ಲವೆ; ಇಂತಹ ರೈತರ ಸಂಖ್ಯೆ ಎಷ್ಟು?

ಇ) ಸದರಿ ಕಂಪನಿಯವರು ಈ ಜಮೀನಿನಲ್ಲಿ ಅಕ್ರಮವಾಗಿ ಅನಧಿಕೃತವಾಗಿ ಸೋಲಾರ್ ವಿದ್ಯುತ್ ವಾಹಕ ತಂತಿ ಬೇಲಿ ಹಾಕಿರುವುದು ಸ್ಥಳೀಯ ರೈತರ ಮೇಲೆ ದಬ್ಬಾಳಿಕ, ದೌರ್ಜನ್ಯ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ಅತಿಕ್ರಮವನ್ನು ತಡೆಯಲು ಭೂಮಿಯನ್ನು ತೆರವುಗೊಳಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು):

ಬೆಂಗಳೂರು ದಕ್ಷಿಣ ತಾ.ತಾವರೆಕೆರೆ ಹೋಬಳಿ, ಚಿಕ್ಕೆಲೂರು ಮತ್ತು ಚಿಕ್ಕೆಲೂರು ರಾಂಪುರ ಗ್ರಾಮಗಳಲ್ಲಿನ ಒಟ್ಟು 79.08 ವಿಸ್ತೀರ್ಣವನ್ನು ಇಂಡೋ ಅಮೆರಿಕನ್ ಹೈಬ್ರಿಡ್ಜ್ ಸೀಡ್ಸ್ ಕಂಪನಿಯವರು ಕ್ರಯದ ಮೂಲಕ ಹಲವಾರು ರೈತರುಗಳಿಂದ ಹೊಂದಲು ಕರ್ನಾಟಕ ಭೂ ಸುಧಾರಣೆ ಕಾಯಿದೆ (ತಿದ್ದುಪಡಿ) ಕಲಂ 109(1)(ಎ)ರಡಿ ಅರ್ಜಿ ಸಲ್ಲಿಸಿರುತ್ತಾರೆ. ಅದರಂತೆ ಸದರಿ ಕಂಪನಿಯವರು ಹೊಂದಲು ಉದ್ದೇಶಿಸಿರುವ ಭೂಮಿಯ ಸ.ನಂ.ವಾರು ಈ ಕೆಳಕಂಡಂತೆ ಇದೆ.

ಕ್ರಮ ಸಂಖ್ಯೆ	ಗ್ರಾಮ	ಭೂಮಾಲೀಕರ ಹೆಸರು	ಸ.ನಂ.	ವಿಸ್ತೀರ್ಣ ಎಕರೆ : ಗುಂಟೆ
1	2	3	4	5 6
1.	ಚಿಕ್ಕೆಲೂರು ರಾಂಪುರ	ಕೆ.ಬಿ.ಮಹಾದೇವಿ.	10: 1	1: 10
			10:2	2: 15
			11	1. 10
			15	1. 15
			25	1. 32
			21	1.25
			ಒಟ್ಟು	**9. 17**
2.	ಚಿಕ್ಕೆಲೂರು ರಾಂಪುರ	ಪಿ.ವಿಜಯ	11	0.25
			22	0. 18
			23	0. 30
			24	1.27
			ಒಟ್ಟು	**3.20**
3.	ಚಿಕ್ಕೆಲೂರು ರಾಂಪುರ	ಬಿ.ಎಸ್.ಪಾರ್ವತಮ್ಮ	14:5	2.00
			14:6	2.00
			ಒಟ್ಟು	**4.00**
4.	ಚಿಕ್ಕೆಲ್ಲೂರು	ಶ್ರೀಮತಿ ವೆಂಕಟಮ್ಮ	49	1.20
		ಲಕ್ಷ್ಮಮ್ಮ	49	1.20
			ಒಟ್ಟು	**3.00**
5.	ಚಿಕ್ಕೆಲ್ಲೂರು	ದ್ಯಾವಯ್ಯ		
		ಉರುಫ್	54	2.03

		ದ್ಯಾವಣ್ಣ	54	5.00
			ಒಟ್ಟು	**7.03**
6.	ಚಿಕ್ಕೆಲ್ಲೂರು ರಾಂಪುರ	ಶ್ರೀಮತಿ	5.4	2.14
		ವಿಜಯಲಕ್ಷ್ಮಿ	7	1.38
			13	2.19
			17	0.04
			52	1.30
			69	2.34
			ಒಟ್ಟು	**11.19**
7.	ಚಿಕ್ಕೆಲ್ಲೂರು ರಾಂಪುರ	ಶ್ರೀ ಪಟೇಲ್ ಚನ್ನೇಗೌಡ		
		ಚೆನ್ನಪಟ್ಟಣ ತಾ.	4	4.28
			5:2	1.36
			5:3	1.00
			6:1	3.39
			45:ಎ	3.34
			45:1ಬಿ	3.31
			49	5.00
			50	3.20
			51	3.25
			53:1	2.13
			54	4.37
			66:ಬಿ	1.10
			ಒಟ್ಟು	**40.29**
			ಜುಮ್ಲಾ-	**79.08**

ಆ) ಇಲ್ಲ. ಭೂ ಮಾಲೀಕರ ಒಪ್ಪಿಗೆ ಪಡೆದು ಕರ್ನಾಟಕ ಭೂ ಸುಧಾರಣೆ ಕಾಯಿದೆ ಕಲಂ 109ರಂತೆ ಜಮೀನನ್ನು ಕ್ರಯಕ್ಕೆ ಪಡೆಯಲು ಸರ್ಕಾರದ ಅನುಮತಿ ಕೋರಿರುವುದರಿಂದ ಸ್ಥಳೀಯ ರೈತರಿಗೆ ತೊಂದರೆ ಉಂಟಾಗುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಇಲ್ಲ.

ಈ) ಭೂ ಸುಧಾರಣೆ ಕಾಯಿದೆ ಕಲಂ 79ಎ 79ಬಿ, 80ನ್ನು ಉಲ್ಲಂಘಿಸಿರುವ ಬಗ್ಗೆ ವಿವರವಾದ ತನಿಖೆ ನಡೆಸಲು ಜಿಲ್ಲಾಧಿಕಾರಿ ಬೆಂಗಳೂರು ಇವರಿಗೆ ನಿರ್ದೇಶನ ನೀಡಲಾಗಿದೆ. ಪ್ರಸ್ತುತ ಸಂಸ್ಥೆಯವರಿಗೆ ಪ್ರಶ್ನಿತ ಜಮೀನನ್ನು ಹೊಂದಲು ಸರ್ಕಾರದಿಂದ ಯಾವುದೇ ಅನುಮತಿ ನೀಡಿರುವುದಿಲ್ಲ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ನಿರ್ಮಾಣ.

8 (47)

ಶ್ರೀ ಹೆಚ್.ಸಿ.ಬಾಲಕೃಷ್ಣ (ಮಾಗಡಿ): ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಯಾವ ತಾಲ್ಲೂಕಿನಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ನಿರ್ಮಿಸಲಾಗುವುದು?

ಆ) ಇದಕ್ಕಾಗಿ ಈವರೆವಿಗೆ ಎಷ್ಟು ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ? ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಇ) ವಿಮಾನ ನಿಲ್ದಾಣ ಪ್ರಕ್ರಿಯೆಯು ಅತ್ಯಂತ ಮಂದಗತಿಯಲ್ಲಿ ನಡೆಯುತ್ತಿರಲು ಕಾರಣಗಳೇನು?

ಈ) ಈ ಕಾರ್ಯ ತ್ವರಿತಗತಿಯಲ್ಲಿ ನಡೆಯಲು ಸರ್ಕಾರದವರು ಕೈಗೊಳ್ಳುವ ಕ್ರಮಗಳೇನು?

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯ ಮಂತ್ರಿಗಳು):

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ಮತ್ತು ಬೆಂಗಳೂರು ಉತ್ತರ ತಾಲ್ಲೂಕಿನ ಸರಹದ್ದಿನಲ್ಲಿ ಗುರುತಿಸಲಾದ ನಿವೇಶನದಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ನಿರ್ಮಿಸುವ ಪ್ರಸ್ತಾವನೆ ಇದೆ.